<u>ದಿನಾಂಕ **23.07.2026** ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು</u>.

<u>ಮುಖ್ಯ ವಿಚಾರಣೆ ಅರ್ಜಿದಾರರ ಪರ ಶ್ರೀ  ವಕೀಲರಿಂದಃ</u>

ಈ ಅರ್ಜಿಯಲ್ಲಿ ನಾನು ಅರ್ಜಿದಾರನಿರುತ್ತೇನೆ. ಈ ದಿನ ನಾನು ನನ್ನ ಮುಖ್ಯ ವಿಚಾರಣೆಯ ಸಂಗತಿಗಳನ್ನು ಪ್ರಮಾಣ ಪತ್ರದ ರೂಪದಲ್ಲಿ ಸಲ್ಲಿಸಿರುತ್ತೇನೆ. ಈ ಪ್ರಮಾಣ ಪತ್ರದಲ್ಲಿ ಬರೆದ ಸಂಗತಿಗಳು ಸತ್ಯವಾಗಿರುತ್ತದೆಂದು ನಾನು ಸಹಿ ಮಾಡಿರುತ್ತೇನೆ. ನಾನು ಹಾಜರು ಪಡಿಸಿರುವ ದಾಖಲೆಗಳನ್ನು ನೋಡಿ ಗುರುತಿಸಿರುತ್ತೇನೆ.

ಎದುರುದಾರರು ನೀಡಿರುವಂತಹ ಅಲಭ್ಯ ಪ್ರಮಾಣ ಪತ್ರ ನಿಪಿ **1** ಎಂದು,
ನಮ್ಮ ಕುಟುಂಬದ ವಂಶವೃಕ್ಷ ನಿಪಿ **2** ಎಂದು,
ಪತ್ರಿಕಾ ಪ್ರಕಟಣೆಯ ಅವಶ್ಯಕ ಭಾಗ ನಿಪಿ **3** ಎಂದು
ಎರಡು ಪಹಣಿಗಳನ್ನು ನಿಪಿ-**4** ಮತ್ತು **5** ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯಲ್ಲಿ ಕೋರಿರುವಂತೆ ಆದೇಶ ಮಾಡಬೇಕಾಗಿ ಪ್ರಾರ್ಥನೆ.
**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓದಿ ಹೇಳಿ ಕೇಳಿ ಸರಿ ಇದೆ.
**sd/-**

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಚನ್ನರಾಯಪಟ್ಟಣ.